**ಪೊಲೀಸ್:** ನಾಯಿಯನ್ನು ಪಾರ್ಕಿನೊಳಗೆ ಕರೆದುಕೊಂಡು ಬರಬಾರದಂತ ನಿಮಗೆ ಗೊತ್ತಿಲ್ವಾ?
**ಗುಂಡ:** ಸರ್ ಈ ನಾಯಿ ನನ್ನದಲ್ಲ.
**ಪೊಲೀಸ್:** ಮತ್ತೆ ಅದು ನಿಮ್ಮ ಹಿಂದೇನೇ ಬರ್ತಿದೆ?
**ಗುಂಡ:** ನನಗೇನು ಗೊತ್ತು? ಅದನ್ನೇ ಕೇಳಿ.




**ಗುಂಡ:** ಸರ್ ನಾನು ನಿಮ್ಮ ಮಗಳನ್ನು ಹತ್ತು ವರ್ಷದಿಂದ ಪ್ರೀತಿಸ್ತಿದ್ದೀನಿ.
**ರಾಯರು:** ಅದಕ್ಕೇನೀಗ?
**ಗುಂಡ:** ಅವಳನ್ನು ಮದುವೆಯಾಗೋಣ ಅಂತಿದ್ದೀನಿ.
**ರಾಯರು:** ಅಷ್ಟೇನಾ? ನಾನೆಲ್ಲೋ ಸಾಲ ಕೇಳೋಕೆ ಬಂದೆ ಅಂತ ಗಾಬರಿಯಾದೆ.

**ಗೆಳೆಯ:** ನೋಡಿದೆಯೇನೋ, ಡಾ. ಕರಿಯಪ್ಪ ನಮ್ಮ ರಾಣಿಗೆ ಆಪ್ತ ವೈದ್ಯರಾಗಿ ನೇಮಕಗೊಂಡಿದ್ದಾರಂತೆ.
**ಗುಂಡ:** ಅರೆ ಹೌದಾ? ಹಾಗಾದರೆ ನಮ್ಮ ರಾಣಿಯನ್ನು ಆ ದೇವರೇ ಬಂದು ಕಾಪಾಡಬೇಕು.

**ಪ್ರಯಾಣಿಕ:** ಏನಯ್ಯಾ ನನ್ನ ಜೇಬಿಗೆ ಕೈ ಹಾಕಿ, ಕಳ್ಳತನ ಮಾಡ್ತಿದ್ದೀಯಾ? ನಿನಗೆ ನಾಚಿಕೆಯಾಗಲ್ವಾ?
**ಕಳ್ಳ:** ನಾಚಿಕೆಯಾಗಬೇಕಾದ್ದು ನಿನಗೆ, ನನಗಲ್ಲ. ಜೇಬಲ್ಲಿ ಒಂದೇ ಒಂದು ನಯಾಪೈಸೆ ಇಟ್ಟಿಲ್ಲವಲ್ಲ. ನೀನೆಂತಹ ಬಿಕಾರಿ.

**ಗುಂಡ:** ನನ್ನ ಮೂಗಿನ ಆಕಾರ ಬದಲಾಯಿಸಬೇಕು. ಅದಕ್ಕೆ ಎಷ್ಟು ತಗೋತೀರಿ?
**ವೈದ್ಯ:** ಹತ್ತು ಸಾವಿರ ರೂಪಾಯಿ.
**ಗುಂಡ:** ತುಂಬಾ ದುಬಾರಿಯಾಯಿತು.
**ವೈದ್ಯ:** ಹಾಗಾದರೆ ನಾನು ಹೇಳಿದ ಹಾಗೆ ಮಾಡಿ. ಒಂದೇ ಒಂದು ನಯಾಪೈಸೆ ಖರ್ಚಾಗುವುದಿಲ್ಲ.
**ಗುಂಡ:** ಏನು ಮಾಡಬೇಕು ಹೇಳಿ.
**ವೈದ್ಯ:** ನಿಮ್ಮ ಮೂಗನ್ನು ಯಾವುದಾದರೂ ಕಂಬಕ್ಕೆ ಗುದ್ದಿಸಿಬಿಡಿ.

**ಗುಂಡ:** (ಒಬ್ಬ ಖ್ಯಾತ ನಟಿಗೆ) ‘ನಾನು ನಿಮ್ಮನ್ನು ಸಹೋದರಿ ಎಂದು ಭಾವಿಸುತ್ತೇನೆ’ ಎಂದು ಪತ್ರ ಬರೆದ.
**ತಂದೆ:** ಅಯ್ಯೋ ಮುಟ್ಠಾಳ ನೀನು ಎಲ್ಲರನ್ನೂ ಸಹೋದರಿ ಅಂತ ಅಂದುಕೊಂಡರೆ ನೀನು ಯಾರನ್ನು ಮದುವೆಯಾಗುತ್ತೀಯಾ?

**ಗುಂಡ:** ನಾನು ಸಾಹಿತ್ಯ ಸೇವೆ ಮಾಡ್ತಿದ್ದೀನಿ.
**ತಂದೆ:** ಏನಪ್ಪಾ ಅಂಥ ಸಾಹಿತ್ಯ ಸೇವೆ ನೀನು ಮಾಡ್ತಿರೋದು? ಕಥೆ ಕಾದಂಬರಿ ಏನಾದ್ರೂ ಬರೀತಾ ಇದೀಯಾ?
**ಗುಂಡ:** ಹಾಗೇನೂ ಇಲ್ಲ. ಪುಸ್ತಕದ ಮೇಲಿನ ದೂಳನ್ನು ಬಟ್ಟೆಯಿಂದ ಹೊಡೀತಾ ಇದೀನಿ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು


ಪ್ರಬಂಧದ ಅನುಬಂಧ
ಯುಗಾದಿಯ ಸಂಬಂಧ

**ಸುಧಾ**
ಯುಗಾದಿ ವಿಶೇಷಾಂಕ-2024

# ಓದುಗರ ವೇದಿಕೆ



**ಕೊನೆಯ ದಿನಾಂಕ**
**ಫೆ.24, 2024**

## ಸುಧಾ-60: ಮರೆಯಲಿ ಹ್ಯಾಂಗ...

ಅರವತ್ತರ ಸಂಭ್ರಮದಲ್ಲಿರುವ ‘ಸುಧಾ’ ಲಕ್ಷಾಂತರ ಓದುಗರ ಭಾವಕೋಶಗಳಲ್ಲಿ ಬೆರೆತುಹೋಗಿರುವ ವಾರಪತ್ರಿಕೆ. ಅಂದಹಾಗೆ, ‘ಸುಧಾ’ದೊಂದಿಗಿನ ನಿಮ್ಮ ಸಂಬಂಧ ಯಾವ ಬಗೆಯದು ಎನ್ನುವುದನ್ನು ಹಂಚಿಕೊಳ್ಳಲು ‘ಯುಗಾದಿ ಸಂಚಿಕೆ’ ವೇದಿಕೆ ಕಲ್ಪಿಸುತ್ತಿದೆ. ಭಾವನೆಗಳ ಕಡಲಲ್ಲಿ ತೇಲಿಬರುತ್ತಿರುವ ನೆನಪುಗಳ ಹಾಯಿದೋಣಿಯನ್ನು ದಡ ಸೇರಿಸಲು ಇದು ಸಕಾಲ. ನಿಮ್ಮ ವ್ಯಕ್ತಿತ್ವ ಹಾಗೂ ಜೀವನದ ಮೇಲೆ ‘ಸುಧಾ’ ಬೀರಿದ ಪರಿಣಾಮ ಯಾವ ಬಗೆಯದು ಹಾಗೂ ನಿಮ್ಮ ಕುಟುಂಬದಲ್ಲಿ ‘ಸುಧಾ’ ಸ್ಥಾನ ಯಾವ ರೀತಿಯದು ಎನ್ನುವುದರ ಬಗ್ಗೆ ನಮಗೆ ಪುಟ್ಟದಾಗಿ ಬರೆದು ಕಳುಹಿಸಿ.

## ಓದಿದ ಶಾಲೆ: ನೆನಪಿನ ಒಲೆ

ನಿಮ್ಮ ಬಾಲ್ಯದ ಶಾಲೆ ಎಲ್ಲಿದೆ? ಹೇಗಿದೆ? ಆ ಶಾಲೆ ನಿಮ್ಮಲ್ಲಿ ಉಳಿಸಿರುವ ಸಿಹಿ–ಕಹಿ ನೆನಪುಗಳು ಯಾವ ಬಗೆಯವು? ಶಾಲೆಯೊಂದಿಗೆ ತಳುಕು ಹಾಕಿಕೊಂಡ ಮರೆಯಲಾಗದ ನೆನಪು ಯಾವುದು? ಶಾಲೆಗೆ ಸಂಬಂಧಿಸಿದಂತೆ ಈಗಲೂ ನಿಮ್ಮನ್ನು ಪುಳಕಗೊಳಿಸುವ ನೆನಪೊಂದನ್ನು ‘ಸುಧಾ’ ಓದುಗರೊಂದಿಗೆ ಹಂಚಿಕೊಳ್ಳಿ.

ಮೇಲಿನ ವಿಷಯಗಳಲ್ಲಿ ಯಾವ ವಿಷಯದ ಬಗ್ಗೆಯಾದರೂ ಬರೆಯಬಹುದು. ‘ಓದುಗರ ವೇದಿಕೆ’ ಬರಹಗಳು (ನುಡಿ–ಯೂನಿಕೋಡ್) 250 ಶಬ್ದಗಳ ಮಿತಿಯಲ್ಲಿರಲಿ. ಬರಹದೊಂದಿಗೆ ನಿಮ್ಮ ಭಾವಚಿತ್ರವೂ ಇರಲಿ.

**ವಿಳಾಸ:**
**ಸಂಪಾದಕರು, ಸುಧಾ ಯುಗಾದಿ ವಿಶೇಷಾಂಕ**
**ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 560001**
ಇಮೇಲ್: **ugadi@sudha.co.in**